**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 46/2020 **PW**-1

**ದಿಃ 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಬರ 4 ಪರ ವಕೀಲರಾದ ಶ್ರೀ ಹೆಚ ಹೆಚ ಬಿ ರವರಿಂದ.**

ನನಗೆ ಆಂಗ್ಲ ಭಾಷೆ ಸ್ವಲ್ಪ-ಸ್ವಲ್ಪ ಓದಲು ಬರೆಯಲು ಬರುತ್ತದೆ. ಪ್ರಸ್ತುತ ದಾವೆಯನ್ನು ಯಾವ ಕಾರಣಕ್ಕೆ ಹಾಕಿದ್ದೀರಿ ಎಂದರೆ ಸಾಕ್ಷಿ ಯುನಿಯನ್ ಬ್ಯಾಂಕನಲ್ಲಿ ನನ್ನ ಅಕೌಂಟ ಇತ್ತು, ಸಾಕ್ಷಿ ಮುಂದುವರೆದು ದಾವಾ ಹಾಕಿದ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ವಿರುದ್ಧ ನಾನು ಯಾವುದೇ ಮಾಗಣಿ ಕೇಳಿಲ್ಲವೆಂದರೆ ಸಾಕ್ಷಿ ಯಾವ ಕಾರಣಕ್ಕೆ ಪಕ್ಷಗಾರನ್ನಾಗಿ ಮಾಡಿದ್ದೇನೆಂದು ನನಗೆ ಗೊತ್ತಾಗಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಪೂರ್ವದಲ್ಲಿ ಪ್ರತಿವಾದಿ ನಂಬರ 2 ಮತ್ತು 3 ರವರು ಬ್ಯಾಂಕನಲ್ಲಿ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ವಿರುದ್ಧ ಯಾವುದೇ ಮಾಗಣಿ ಕೇಳದಿದ್ದರು ಅವರನ್ನು ಈ ಪ್ರಕರಣದಲ್ಲಿ ಸುಳ್ಳು ಪಕ್ಷಗಾರನ್ನಾಗಿ ಮಾಡಿದ್ದೇನೆಂದರೆ ಸರಿಯಲ್ಲ. ನೀವು 4 ನೇ ಪ್ರತಿವಾದಿ ಬ್ಯಾಂಕನಿಂದ ಸಾಲ ಏನಾದರೂ ತೆಗೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಎನು ಇಲ್ಲದಿದ್ದರು ಕೂಡಾ ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿದ್ದೇನೆಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರನ್ನು ಕೂಗಿ ಕೆರೆಯಿಸಲಾಯಿತು, ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ